ಛೇರ್ಮನ್ : ಶೂನ್ಯವೇಳೆ ವಿಷಯಗಳು ಮತ್ತು ಗಮನ ಸೆಳೆಯುವ ಸೂಚನೆಗಳು, ಹಾಗೂ ಪ್ರಶ್ನೋತ್ತರಗಳು ಇವತ್ತು ಹಾಗೆಯೇ ಉಳಿದಿರುವುದರಿಂದ ಮತ್ತೆ ನಾಳೆ ಒಂದು ದಿವಸ ಸದನ ಇಟ್ಟುಕೊಳ್ಳಲಾಗಿದೆ. ಆದ್ದರಿಂದ ಉಳಿದ ಎಲ್ಲಾ ವಿಷಯಗಳನ್ನು ನಾಳೆ ತೆಗೆದುಕೊಳ್ಳೋಣ. ಈಗ ತಾವು ದಯವಿಟ್ಟು ಕುಳಿತುಕೊಳ್ಳಬೇಕು.

6.50 ಪಿ.ಎಂ.

ಶ್ರೀ ಉಮೇಶ್ ವಿ. ಕತ್ತಿ : ಜಿಲ್ಲಾ ಮಧ್ಯವರ್ತಿ ಸಹಕಾರ ಬ್ಯಾಂಕ್ ಮುಂದೆ ರಾಯಭಾಗ್ ಸೊಸೈಟಿಯವರು ಮುಷ್ಕರ ಮಾಡುತ್ತಿದ್ದು ಇದರಿಂದಾಗಿ ಬ್ಯಾಂಕಿನ ವ್ಯವಹಾರಕ್ಕೆ ಬಹಳ ತೊಂದರೆಯಾಗುತ್ತದೆ ಹಾಗೂ ಇಯರ್ ಎಂಡಿಂಗ್, ವ್ಯವಹಾರಕ್ಕೆ ತೊಂದರೆಯಾಗುತ್ತಿದ್ದು ಇವರು ಮುಷ್ಕರ ಹೂಡಿರುವುದರಿಂದ ಹೊರಗಡೆ ಜನ ಒಳಗಡೆ ಹೋಗುವ ಹಾಗೆ ಇಲ್ಲ ಒಳಗಡೆ ಇರುವ ಜನ ಹೊರಗಡೆ ಹೋಗುವ ಹಾಗೆ ಇಲ್ಲ. ಹೀಗಾಗಿ ಬಹಳ ತೊಂದರೆಯಾಗಿದೆ. ಆದ್ದರಿಂದ ಮಾನ್ಯ ಗೃಹ ಮಂತ್ರಿಗಳು ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು, ಏಕೆಂದರೆ, ನಾಳೆ ಲಾ ಅಂಡ್ ಆರ್ಡರ್ ಪ್ರಾಬ್ಲಂ ಆಗಬಾರದು, ಇದಕ್ಕೆ ಮಾನ್ಯ ಸಚಿವರು ಉತ್ತರಿಸಬೇಕೆಂದು ತಮ್ಮ ಮುಖಾಂತರ ಮಾನ್ಯ ಸಚಿವರಲ್ಲಿ ಕೇಳಬಯಸುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮುಗರ್ ಫ್ಯಾಕ್ಟರಿ ಪ್ರಾಬ್ಲಂ ಇದೆ ಹಾಗೂ ಡಿಸಿಸಿ ಬ್ಯಾಂಕ್‌ನವರು ಲೋನ್ ಕೊಡುತ್ತಿಲ್ಲ. ಹೀಗಾಗಿ ಅವರು ಅಲ್ಲಿ ಮುಷ್ಕರ ಮಾಡುತ್ತಿದ್ದಾರೆ. ಇಲ್ಲಿ ಲಾ ಅಂಡ್ ಆರ್ಡರ್ ಪ್ರಶ್ನೆನೇ ಬರುವುದಿಲ್ಲ. ನಮ್ಮಲ್ಲಿ ಸಕ್ಕರೆ ಇದೆ ಸಕ್ಕರೆ ತೆಗೆದುಕೊಂಡು ಡಿಪಾಸಿಟ್ ಇಟ್ಟುಕೊಂಡು ದುಡ್ಡು ಕೊಡಿ ಎಂದು ಇವರು, ಡಿಸಿಸಿ ಬ್ಯಾಂಕ್ ನವರು ಲೋನ್ ಕೊಡುತ್ತಿಲ್ಲವೆಂದು ಅವರು, ಹೀಗಾಗಿ ಅಲ್ಲಿ ಗೊಂದಲವಿದೆ, ಇದನ್ನು ಮಾನ್ಯ ಸಕ್ಕರೆ ಸಚಿವರು ಹಾಗೂ ಸಹಕಾರ ಸಚಿವರು ಬಗೆ ಹರಿಸಬೇಕೇ ಹೊರತು ನಾನೇನು ಮಾಡಲಿ? ಬೇಕಾದರೆ ಇದು ಎಲ್ಲಾ ಆದ ಮೇಲೆ ನೋಡೋಣ.

(8) ಅರ್ಜಿಗಳನ್ನು ಒಪ್ಪಿಸುವುದು.

ಛೇರ್ಮನ್ : ಈಗ ಅರ್ಜಿಗಳನ್ನೊಪ್ಪಿಸುವುದು.

ಶ್ರೀ ಕೆ. ಪ್ರಭಾಕರ ಬಂಗೇರ (ಬೆಳ್ತಂಗಡಿ) : ಮಾನ್ಯ ಛೇರ್ಮನ್‌ರವರೆ,

ಅ. ಬೆಳ್ತಂಗಡಿ ತಾಲ್ಲೂಕಿನ ಮಲೆಬೆಟ್ಟು ಶ್ರೀ ಮಹಾಗಣಪತಿ ದೇವಸ್ಥಾನದ ಜೀರ್ಣೋದ್ಧಾರದ ಬಗ್ಗೆ.

ಆ. ಬೆಳ್ತಂಗಡಿ ತಾಲ್ಲೂಕಿನ ಬೆಳಾಲು ಗ್ರಾಮದಿಂದ ಕೊಲ್ಪಾಡಿ ಮಾರ್ಗದ ರಸ್ತೆಗೆ ಡಾಮರೀಕರಣ ಮಾಡಿಸುವ ಬಗ್ಗೆ.

ಇ. ಬೆಳ್ತಂಗಡಿ ತಾಲ್ಲೂಕಿನ ಮಲೆಬೆಟ್ಟು-ನಿನ್ಕಿಲ್ಲು ರಸ್ತೆಯನ್ನು ಡಾಮರೀಕರಣ ಮಾಡಿಸುವ ಬಗ್ಗೆ.

ಈ. ಬೆಳ್ತಂಗಡಿ ತಾಲ್ಲೂಕಿನ ಹೊಗ್ರು ಮುಗೇರಡ್ಕ ಬಳಿಯಿರುವ ದಂಬೆತ್ತಿ ಮಾರು ಹಳ್ಳಕ್ಕೆ ಕಿರು ಸೇತುವೆ ನಿರ್ಮಾಣ ಮಾಡುವ ಬಗ್ಗೆ.